# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 225
ಸದಸ್ಯರ ಹೆಸರು : ಶ್ರೀ ಬಿ.ಜಿ. ಪಾಟೀಲ್
ಉತ್ತರಿಸುವ ದಿನಾಂಕ : 06.12.2023
ಉತ್ತರಿಸುವ ಸಚಿವರು : ಕಂದಾಯ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ ಎಷ್ಟು : | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ವಿವರ :<br>1. ಕಲಬುರಗಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು : 149<br>2. ಯಾದಗಿರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು : 19 |
| ಆ | ಸ್ವಾತಂತ್ರ್ಯ ಹೋರಾಟಗಾರರಿಗೆ ಹಾಗೂ ಅವರ ಅವಲಂಬಿತರಿಗೆ ನೀಡಲಾಗುತ್ತಿರುವ ಮಾಸಾಶನ ಎಷ್ಟು : ಇತರೆ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದಲ್ಲಿ ಕಡಿಮೆ ಮಾಸಾಶನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸ್ವಾತಂತ್ರ್ಯ ಹೋರಾಟಗಾರರಿಗೆ ಹಾಗೂ ಅವರ ಅವಲಂಬಿತ ಪತಿ/ಪತ್ನಿಗೆ ಮಾಹೆಯಾನ ರೂ. 10,000/- ದಂತೆ ಗೌರವಧನ ಮತ್ತು ಕುಟುಂಬ ಪಿಂಚಣಿಯನ್ನು ಪಾವತಿಸಲಾಗುತ್ತಿದೆ.<br>ಸದರಿ ಮಾಸಾಶನವನ್ನು ಮಾಹೆಯಾನ ರೂ. 10,000/- ದಿಂದ ರೂ. 15,000/- ಕ್ಕೆ ಹೆಚ್ಚಿಸುವ ಕುರಿತಾದ ಪ್ರಸ್ತಾವನೆ ಸರ್ಕಾರದ ಮಟ್ಟದಲ್ಲಿ ಪರಿಶೀಲನಾ ಹಂತದಲ್ಲಿದೆ. |
| ಇ | ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಸಾಶನದ ಜೊತೆಗೆ ಇತರೆ ಯಾವುದಾದರೂ ಸೌಲಭ್ಯಗಳನ್ನು ನೀಡಲಾಗುತ್ತಿದೆಯೇ : | ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಸಾಶನದ ಜೊತೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಉಚಿತ ಪ್ರಯಾಣ ಸೌಲಭ್ಯವನ್ನು ಸಹ ನೀಡಲಾಗುತ್ತಿದೆ. |
| ಈ | ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಸಾಶನ ನೀಡಲು ಇರುವ ಮಾನದಂಡಗಳೇನು :<br><br>ಸದರಿ ಜಿಲ್ಲೆಗಳಿಂದ ಮಾಸಾಶನ ನೀಡುವಂತೆ ಸಲ್ಲಿಕೆಯಾಗಿರುವ ಅರ್ಜಿಗಳು ಎಷ್ಟು ? (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಡಿ.ಪಿ.ಎ.ಆರ್ 89 ಪಿ.ಎಫ್.ಜೆ 94, ದಿನಾಂಕ:27-12-1995ರನ್ವಯ ಸ್ವಾತಂತ್ರ್ಯ ಹೋರಾಟಗಾರರ ಗೌರವಧನವನ್ನು ಪಡೆಯಲು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಬಗ್ಗೆ ಕೊನೆ ಪಕ್ಷ ಒಂದು ದಿನವಾದರೂ ಸೆರೆಮನೆ ವಾಸ ಅನುಭವಿಸಿರಬೇಕು. ಮೇಲ್ಕಂಡ ಸರ್ಕಾರದ ಆದೇಶದನ್ವಯ ರಾಜ್ಯ ಗೌರವಧನ ಮಂಜೂರಾತಿಗೆ ಅಗತ್ಯವಾದ ದಾಖಲೆಗಳು/ಮಾನದಂಡಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ.<br><br>• ಹೈದ್ರಾಬಾದ್ ಕರ್ನಾಟಕ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿರುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮಶಾಸನ ಮಂಜೂರಾತಿ ಕೋರಿ ಜಿಲ್ಲಾಧಿಕಾರಿ, ಕಲಬುರಗಿ ಜಿಲ್ಲೆ ಇವರ ಮೂಲಕ ಒಂದು ಅರ್ಜಿ ಸ್ವೀಕೃತವಾಗಿದೆ ಹಾಗೂ ನಿಗಧಿತ ನಮೂನೆಯಲ್ಲಿ ನೇರವಾಗಿ ಸರ್ಕಾರದಲ್ಲಿ ಒಂದು ಅರ್ಜಿ ಸ್ವೀಕೃತವಾಗಿದೆ. ಈ ಎರಡೂ ಅರ್ಜಿಗಳಲ್ಲಿ ಜಿಲ್ಲಾಧಿಕಾರಿ, ಕಲಬುರಗಿ ರವರಿಂದ ಮಾಹಿತಿ/ವರದಿಯನ್ನು ಕೋರಲಾಗಿದೆ.<br>• ಯಾದಗಿರಿ ಜಿಲ್ಲೆಯಿಂದ ಯಾವ ಪ್ರಸ್ತಾವನೆಯೂ ಇರುವುದಿಲ್ಲ. |

ಕಡತ ಸಂಖ್ಯೆ: ಆರ್‌ಡಿ-ಪಿಎಫ್‌ಜೆ/81/2023

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

## ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಜಿ. ಪಾಟೀಲ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 225 ಕ್ಕೆ ಅನುಬಂಧ

ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 89 ಪಿಎಫ್‌ಜಿ 94, ದಿನಾಂಕ:27-12-1995ರನ್ವಯ ಸ್ವಾತಂತ್ರ್ಯ ಹೋರಾಟಗಾರರಿಗೆ ರಾಜ್ಯ ಸರ್ಕಾರದ ಗೌರವಧನ ಮಂಜೂರಾತಿಗೆ ಈ ಕೆಳಕಂಡ ದಾಖಲೆಗಳು / ಮಾನದಂಡಗಳು ಅತ್ಯವಶ್ಯಕವಾಗಿರುತ್ತವೆ:

1) ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿರುವುದಕ್ಕೆ ಜೈಲು ಅಧಿಕಾರಿಗಳಿಂದ ಪಡೆದ ಮೂಲ ಜೈಲು ಪ್ರಮಾಣ ಪತ್ರ ಅಥವಾ ಜೈಲು ಶಿಕ್ಷೆ ಅನುಭವಿಸಿದ ಅವಧಿಯ ದಾಖಲೆಗಳು ಲಭ್ಯವಿಲ್ಲದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಂದ ಪಡೆದ ಮೂಲ ಹಿಂಬರಹ.
2) ಕರ್ನಾಟಕ ವಿಧಾನ ಮಂಡಲ ಅಥವಾ ಸಂಸತ್ ಸದಸ್ಯರ (ಹಾಲಿ ಅಥವಾ ಮಾಜಿ] ಇವರಿಂದ ಪಡೆದ ಸಹಬಂಧಿ ಪ್ರಮಾಣ ಪತ್ರ

ಅಥವಾ

ಒಂದು ವರ್ಷಕ್ಕಿಂತ ಕಡಿಮೆಯಿಲ್ಲದಂತೆ ಜೈಲು ಶಿಕ್ಷೆ ಅನುಭವಿಸಿರುವ ಹಾಗೂ ಕೇಂದ್ರ ಮತ್ತು ರಾಜ್ಯ ಗೌರವಧನವನ್ನು ಪಡೆದಿರುವ ಇಬ್ಬರು ಸ್ವಾತಂತ್ರ್ಯ ಯೋಧರಿಂದ ಪಡೆದ ಸಹಬಂಧಿ ಪ್ರಮಾಣ ಪತ್ರಗಳ ಮೂಲ ಪತ್ರ

ಅಥವಾ

ಭೂಗತ ಕಾರ್ಯ ನಿರ್ವಹಿಸಿರುವುದಕ್ಕೆ ಪೋಲೀಸ್ ಅಧಿಕಾರಿಗಳಿಂದ ಪಡೆದ ಅರೆಸ್ಟ್ ವಾರೆಂಟ್

ಅಥವಾ

ಘೋಷಿತ ಅಪರಾಧಿ ಎಂಬ ಘೋಷ (proclaimed offender] ಅಥವಾ ಸ್ವಾತಂತ್ರ ಹೋರಾಟ ಸಂಬಂಧ ಅರ್ಜಿದಾರರ ವಿರುದ್ಧ ಹೂಡಲಾಗಿದ್ದ ಮೊಕದ್ದಮೆ ದಾಖಲೆಗಳು ಅಥವಾ ನ್ಯಾಯಾಲಯ ಆದೇಶ ಅಥವಾ ಆ ದಾಖಲೆಗಳು ಲಭ್ಯವಿಲ್ಲದಿದ್ದಲ್ಲಿ ದಾಖಲೆಗಳು ಲಭ್ಯವಿಲ್ಲವೆಂಬ ಬಗ್ಗೆ ಪೋಲೀಸ್ ಅಧಿಕಾರಿ ಅಥವಾ ಜಿಲ್ಲಾಧಿಕಾರಿ ಅಥವಾ ನ್ಯಾಯಾಲಯದಿಂದ ಪಡೆದ ಹಿಂಬರಹ.

3) ಸ್ವಾತಂತ್ರ ಹೋರಾಟಕ್ಕೆ ಸಂಬಂಧಿಸಿದಂತೆ ಮಾಡಿದ ಹೋರಾಟ ಹಾಗೂ ಅನುಭವಿಸಿದ ಶಿಕ್ಷೆಯ ಜುಡಿಶಿಯಲ್ ಮ್ಯಾಜಿಸ್ಟ್ರೇಟ್ ರವರ ಮುಂದೆ ಹೇಳಿಕೆ ನೀಡಿದ ಮೂಲ ಪ್ರಮಾಣ ಪತ್ರ (ಅಫಿಡವಿಟ್).
4) ಭೂಗತ ಕಾರ್ಯ ನಿರ್ವಹಿಸಿರುವುದಕ್ಕೆ ಶಿಬಿರದ ಶಿಬಿರಾಧಿಪತಿಗಳು ಪ್ರಥಮ ದರ್ಜೆ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ರವರ ಮುಂದೆ ಹೇಳಿಕೆ ನೀಡಿದ ಮೂಲ ಪ್ರಮಾಣ ಪತ್ರ.
5) ವೈದ್ಯಾಧಿಕಾರಿಗಳಿಂದ ಪಡೆದ ಗುರುತಿನ ಕಲೆಗಳು ಮತ್ತು ವಿವರದ ಮೂಲ ಪತ್ರ (ದ್ವಿಪ್ರತಿಯಲ್ಲಿ).
6) ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ಅರ್ಜಿದಾರರ ಮೂರು ಮಾದರಿ ಸಹಿಗಳ ಮೂಲ ಪತ್ರ (ದ್ವಿಪ್ರತಿಯಲ್ಲಿ).
7) ಅರ್ಜಿದಾರರು ಪತ್ನಿಯೊಂದಿಗೆ ತೆಗೆಯಿಸಿದ ಭಾವಚಿತ್ರಗಳು - ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟಿರಬೇಕು.
8) ಅರ್ಜಿದಾರರು ಒದಗಿಸಿರುವ ಉರ್ದು ದಾಖಲೆಯ ಮೂಲ ಪತ್ರ
9) ವಿಧವಾ ಪ್ರಕರಣಗಳಲ್ಲಿ –

ಅ) ಪತಿಯ ಮರಣ ಸಮರ್ಥನಾ ಪತ್ರದ ಮೂಲ ಪ್ರತಿ

ಅ) ಸಂಬಂಧಿಸಿದ ತಹಶೀಲ್ದಾರ್ ರವರಿಂದ ಪಡೆದ ವಾರಾಸುದಾರರ ಪ್ರಮಾಣ ಪತ್ರದ ಮೂಲ ಪ್ರತಿ ದೃಢೀಕರಿಸಲ್ಪಟ್ಟಿರಬೇಕು.

10) ಅರ್ಜಿಯನ್ನು ಪೂರ್ಣವಾಗಿ ಭರ್ತಿ ಮಾಡಿ, ಗೆಜೆಟೆಡ್ ಅಧಿಕಾರಿಗಳಿಂದ ಬಗ್ಗೆ ಪ್ರಥಮ ದರ್ಜೆ
11) ಅರ್ಜಿದಾರರ ಮೂಲ ಜನನ ಪ್ರಮಾಣ ಪತ್ರ
12) ಈ ಹಿಂದೆ ರಾಜ್ಯ ಗೌರವಧನಕ್ಕಾಗಿ ಅರ್ಜಿ ಸಲ್ಲಿಸಿದ್ದರೆ ಅದಕ್ಕೆ ಆಧಾರವಾಗಿ ರಾಜ್ಯ ಸರ್ಕಾರದಿಂದ ಬಂದ ಪತ್ರ ಅಥವಾ ಜಿಲ್ಲಾಧಿಕಾರಿಗಳು / ತಹಶೀಲ್ದಾರ ರವರಿಂದ ಪಡೆದ ಪತ್ರಗಳಿದ್ದರೆ ಪ್ರತಿಯನ್ನು ಒದಗಿಸುವುದು.
13) ವಿಳಂಬವಾಗಿ ಅರ್ಜಿ ಸಲ್ಲಿಸಿರುವ ಬಗ್ಗೆ ಕಾರಣ ನೀಡುವ ಜ್ಯೂಡಿಷಿಯಲ್ ಮ್ಯಾಜಿಸ್ಟ್ರೇಟ್ ರವರ ಮುಂದೆ ಪ್ರಮಾಣ ಮಾಡಿದ ಅಫಿಡವಿಟ್

****